# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ – 577 002

ದೂರವಾಣಿ ಸಂಖ್ಯೆ: 08192–208029


ಸಂಖ್ಯೆ: ದಾವಿವಿ/ಶೈಕ್ಷಣಿಕ/484/2018–19/5050 ದಿನಾಂಕ: 13.08.2018

## :ಅಧಿಕೃತ ಜ್ಞಾಪನಾ:

ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಮಟ್ಟದಲ್ಲಿ ಜಾರಿಗೊಳಿಸಿರುವ ಕಡ್ಡಾಯ ವಿಷಯಗಳ ಬೋಧನೆಯ ಬಗ್ಗೆ.

ಉಲ್ಲೇಖ:
1. ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:06.08.2018ರಂದು ಜರುಗಿದ ಡೀನರ ಸಮಿತಿಯ ನಡಾವಳಿಗಳು.
2. ಈ ಕಛೇರಿ ಅಧಿಸೂಚನೆ ಸಂಖ್ಯೆ: ದಾವಿವಿ/ಶೈಕ್ಷಣಿಕ/43/2018–19/3104, ದಿನಾಂಕ: 12.07.2018.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:07.08.2018.

********

ವಿಶ್ವವಿದ್ಯಾನಿಲಯದಲ್ಲಿ 2016–17ನೇ ಶೈಕ್ಷಣಿಕ ಸಾಲಿನಿಂದ ಸಿಬಿಸಿಎಸ್ ಪದ್ಧತಿಯಡಿ ಪಠ್ಯಕ್ರಮಗಳನ್ನು ಸಿದ್ಧಪಡಿಸಿ ಜಾರಿಗೊಳಿಸಲಾಗಿದೆ.

1. ಕಡ್ಡಾಯ ವಿಷಯಗಳನ್ನು ಬೋಧಿಸುವ ಬಗ್ಗೆ:–

a) ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶಾನುಸಾರ ಕಡ್ಡಾಯ ವಿಷಯಗಳಾದ **a) Indian Constitution; b) Environmental Science; c) General Science and Management; d) Social Science and Management (B.Sc/BCA/BSA); e) Computer Application and f) Skill Development Courses – I & II** ಇವುಗಳನ್ನು ನಿಗದಿತ ಸೆಮಿಸ್ಟರ್ ಅವಧಿಯಲ್ಲಿ ಬೋಧನೆಗೆ ಕ್ರಮಕೈಗೊಳ್ಳಲು 2016–17ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಸಿಬಿಸಿಎಸ್ ಪಠ್ಯಕ್ರಮಗಳಲ್ಲಿ ತಿಳಿಸಲಾಗಿದೆ.

b) ಕಡ್ಡಾಯ ವಿಷಯಗಳ ಬೋಧನಾವಧಿ ಮತ್ತು ಬೋಧಿಸುವ ವಿಧಾನ:–

ಸದರಿ ಸಿಬಿಸಿಎಸ್ ಪರಿನಿಯಮಗಳನುಸಾರ ಕಡ್ಡಾಯ ವಿಷಯಗಳಾದ **a) Indian Constitution; b) Environmental Science; c) General Science and Management; d) Social Science and Management (B.Sc/BCA/BSA); e) Computer Application and f) Skill Development Courses – I & II** ಇವುಗಳ ಬೋಧನಾವಧಿಯು–4 ಗಂಟೆಗಳಾಗಿದ್ದು, ಇದು ಸಾಮಾನ್ಯ ಕಾರ್ಯಭಾರದಲ್ಲಿ ಒಳಗೊಂಡಿರುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

c) ಅಲ್ಲದೆ, ಈ ಕಡ್ಡಾಯ ವಿಷಯಗಳ ಪಠ್ಯಕ್ರಮಗಳನ್ನು ಬಹಳ ಸರಳವಾಗಿ ಸಿದ್ಧಪಡಿಸಲಾಗಿದ್ದು, ಸದರಿ ವಿಷಯಗಳಲ್ಲಿ ಸಾಮಾನ್ಯ ಜ್ಞಾನವುಳ್ಳ ಅಧ್ಯಾಪಕರುಗಳು ಬೋಧಿಸುವಂತಹ ರೀತಿಯಲ್ಲಿರುತ್ತದೆ. ಆದುದರಿಂದ ಪ್ರಾಂಶುಪಾಲರುಗಳು ತಮ್ಮ ತಮ್ಮ ಕಾಲೇಜಿನಲ್ಲಿನ ಪರಿಣಿತ ಅಧ್ಯಾಪಕರುಗಳಿಂದ ಕಡ್ಡಾಯ ವಿಷಯಗಳ ಬೋಧನೆಗೆ ಕ್ರಮಕೈಗೊಳ್ಳಬೇಕೆಂದು ಅಥವಾ ಸದರಿ ವಿಷಯಗಳಲ್ಲಿ ಪರಿಣಿತರು ತಮ್ಮ ಕಾಲೇಜುಗಳಲ್ಲಿ ಲಭ್ಯವಿಲ್ಲದಿದ್ದಲ್ಲಿ ಪರ್ಯಾಯ ವ್ಯವಸ್ಥೆಯ ಮೂಲಕ ಬೋಧನೆಗೆ ವ್ಯವಸ್ಥೆ ಮಾಡಬೇಕೆಂದು ತಿಳಿಸಲಾಗಿದೆ.

2. ಭಾರತೀಯ ಸಂವಿಧಾನ ವಿಷಯ ಪ್ರಶ್ನೆ ಪತ್ರಿಕೆಯ ಬಗ್ಗೆ:-

ಭಾರತೀಯ ಸಂವಿಧಾನ ವಿಷಯವನ್ನು ಯಾವ ಸೆಮಿಸ್ಟರುಗಳಲ್ಲಿ ಬೋಧಿಸುವುದೆಂಬುದರ ಬಗ್ಗೆ ಈಗಾಗಲೆ ಕಾಲೇಜುಗಳಿಗೆ ಮಾಹಿತಿಯನ್ನು ಉಲ್ಲೇಖ (2)ರ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಅಲ್ಲದೆ, ಈ ವಿಷಯದ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವ ಮಾದರಿಯ ಬಗ್ಗೆ ದಿನಾಂಕ:27.06.2018ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ನಿರ್ಣಯಿಸಲಾಗಿದೆ.

ಸದರಿ ಭಾರತೀಯ ಸಂವಿಧಾನ ವಿಷಯದ ಪರೀಕ್ಷೆಗಳನ್ನು ಇದುವರೆಗೆ **Objective Type** ಪದ್ಧತಿಯಲ್ಲಿ ಏರ್ಪಡಿಸಲಾಗುತ್ತಿದ್ದು, ಸದರಿ ವಿಷಯದ ಬಗ್ಗೆ ವಿದ್ಯಾರ್ಥಿಗಳು ಆಳವಾದ ಜ್ಞಾನ ಪಡೆಯುವ ಸಲುವಾಗಿ 2018-19ನೇ ಸಾಲಿನಿಂದ **Objective/MCQ** ಬದಲಿಗೆ **"ವಿವರಣಾತ್ಮಕ" (Descriptive)** ಮಾದರಿಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಲು ಕ್ರಮಕೈಗೊಳ್ಳಲಾಗಿದೆ. ಆದುದರಿಂದ ಬೋಧನಾ ಕ್ರಮದಲ್ಲಿ ಸೂಕ್ತ ಬದಲಾವಣೆಗಳನ್ನು ಜಾರಿಗೊಳಿಸುವ ಬಗ್ಗೆ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

3. **CBCS ವಿನಿಯಮಗಳ (Regulations) ಲ್ಲಿನ ನಿಯಮ 9.11ರ ಬಗ್ಗೆ:-**

ವಿಶ್ವವಿದ್ಯಾನಿಲಯ 2016-17ರಿಂದ ಜಾರಿಗೊಳಿಸಿರುವ ಸಿಬಿಸಿಎಸ್ ನಿಯಮಗಳ – ನಿಯಮ 9.11ರಲ್ಲಿ "Co-Curricular & Extra Curricular Activities" ಚಟುವಟಿಕೆಗಳ ಮೌಲ್ಯಮಾಪನ ಅಂಕಗಳ ವಿವರಗಳನ್ನು ಈ ಆದೇಶದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ. ಮೇಲ್ಕಂಡ ಚಟುವಟಿಕೆಗಳನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರು, ಕಾಲೇಜಿನಲ್ಲಿರುವ ಅಧ್ಯಾಪಕರುಗಳ ಸಮಿತಿ ರಚಿಸಿ, ಅದರ ಮೂಲಕ ನಿರ್ವಹಿಸಲು ತಿಳಿಸಲಾಗಿದೆ. ಮೌಲ್ಯಮಾಪನ ಸಂಬಂಧ ಪರಿಣಿತರ ಸಮಿತಿಯನ್ನು ರಚಿಸಿ, ವಿದ್ಯಾರ್ಥಿಗಳ ಅರ್ಹತೆಯನ್ನು ಪರಿಶೀಲಿಸಿ, ಅಂಕಗಳನ್ನು ನೀಡುವ ಬಗ್ಗೆ ಕ್ರಮಕೈಗೊಳ್ಳಲು ತಿಳಿಸಲಾಗಿದೆ. ಜೂನ್ 2016ರಲ್ಲಿ ಸಿಬಿಸಿಎಸ್ ವಿನಿಯಮಗಳನ್ನು ಕಾಲೇಜುಗಳಿಗೆ ಪರಿಚಲಿಸಲಾಗಿದೆ. ಆದಾಗ್ಯೂ ಸಹ, ಸದರಿ ಸಿಬಿಸಿಎಸ್ ವಿನಿಯಮಗಳ ಅವಶ್ಯವಿದ್ದಲ್ಲಿ ವಿಶ್ವವಿದ್ಯಾನಿಲಯದ ಅಂತರ್ಜಾಲದಿಂದ ಪಡೆದುಕೊಳ್ಳಬಹುದಾಗಿದೆ. (www.davangereuniversity.ac.in)

ಆದೇಶಾನುಸಾರ

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ – 577002.

CBCS - Regulations - vide Rule: 9.11

## EXTRA CURRICULAR AND CO-CURRICULAR ACTIVTIES MARKS DISTRIBUTION FOR THE FIRST FOUR SEMESTERS OF ALL THE UNDER-GRADUATE COURSES OF DAVANGERE UNIVERSITY

| Sl. No. | Semester | Topics to be covered / Activities to be carried out and recorded | Marks Distribution | Total |
|---|---|---|---|---|
| 1 | I | 1. NSS/NCC/Red-cross/Scouts & Guides// Rover & Ranger | 15 | 50 |
| | | 2. Sports/ Games/ Yoga/ Adventure/ Involvement in popularization of programmes such as Scientific Temper | 15 | |
| | | 3. Special Skills (Music/Painting/Performing Arts) | 10 | |
| | | 4. Attendance | 10 | |
| 2 | II | 1. NSS/NCC/Red-cross/Scouts & Guides | 15 | 50 |
| | | 2. Sports/ Games/ Yoga/ Adventure/ Involvement in popularization of programmes such as Scientific Temper | 15 | |
| | | 3. Seminars/Group Discussions/ Evolution of study groups/Seminar Circles on Indian Thoughts and Ideas/ Publication of articles in newspapers, Magazines or other publications | 10 | |
| | | 4. Attendance | 10 | |
| 3 | III | 1. NSS/NCC/Red-Cross/Scouts & Guides | 15 | 50 |
| | | 2. Sports/ Games/ Yoga/ Adventure/ Involvement in popularization of programmes such as Scientific Temper | 15 | |
| | | 3. Community Work (s) such as promotion of values of National Integration, Environment, Human Rights and Duties, Peace Civic sense/ Activity Exploring different aspects of India Civilization etc. | 10 | |
| | | 4. Attendance | 10 | |
| 4 | IV | 1. NSS/NCC/Red-cross/Scouts & Guides | 15 | 50 |
| | | 2. Sports/ Games/ Yoga/ Adventure/ Involvement in popularization of programmes such as Scientific Temper | 15 | |
| | | 3. Field Work & Reporting/Implant Training/Industry Visit/ A small project work concerning the achievement of India thoughts in different fields/ Computer assisted /web-based learning and e-library skills | 10 | |
| | | 4. Attendance | 10 | |

Note : The Principals of the colleges have to form a Committee to finalize the marks to be awarded to the students of all the courses run in the colleges.

Registrar

REGISTRAR
DAVANGERE UNIVERSITY